# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **608**

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 22-07-2024

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹಜ್ಯೋತಿ ಯೋಜನೆಯಡಿ ಈವರೆಗೆ ನೋಂದಾಯಿಸಲ್ಪಟ್ಟಿರುವ ಗ್ರಾಹಕರ ಸಂಖ್ಯೆ ಎಷ್ಟು; ಈ ಪೈಕಿ ಪೂರ್ಣ ಪ್ರಮಾಣದಲ್ಲಿ ಹಾಗೂ ಭಾಗಶ: ಯೋಜನೆಯ ಲಾಭ ಪಡೆದಿರುವ ಗ್ರಾಹಕರ ಸಂಖ್ಯೆ ಎಷ್ಟು; (ಹೆಸ್ಕಾಂವಾರು ವಿವರ ನೀಡುವುದು) | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಜೂನ್-24 ರ ಅಂತ್ಯಕ್ಕೆ ಗೃಹಜ್ಯೋತಿ ಯೋಜನೆಯಡಿ ನೋಂದಾಯಿಸಲ್ಪಟ್ಟಿರುವ ಗ್ರಾಹಕರು ಮತ್ತು ಈ ಪೈಕಿ ಪೂರ್ಣ ಪ್ರಮಾಣದಲ್ಲಿ ಹಾಗೂ ಭಾಗಶಃ ಯೋಜನೆಯ ಲಾಭ ಪಡೆದಿರುವ ಗ್ರಾಹಕರ ಸಂಖ್ಯೆಯ ಕಂಪನಿವಾರು ವಿವರಗಳು ಈ ಕೆಳಗಿನಂತಿವೆ: |

| ಕಂಪನಿ | ಗೃಹ ಜ್ಯೋತಿ ಯೋಜನೆಯಡಿ ನೊಂದಾಯಿಸಲ್ಪಟ್ಟಿರುವ ಗ್ರಾಹಕರ ಸಂಖ್ಯೆ | ಪೂರ್ಣ ಪ್ರಮಾಣದಲ್ಲಿ ಯೋಜನೆಯ ಲಾಭ ಪಡೆದಿರುವ ಗ್ರಾಹಕರ ಸಂಖ್ಯೆ | ಭಾಗಶಃ ಯೋಜನೆಯ ಲಾಭ ಪಡೆದಿರುವ ಗ್ರಾಹಕರ ಸಂಖ್ಯೆ |
|---|---|---|---|
| ಬೆಸ್ಕಾಂ | 7013678 | 3272366 | 3253033 |
| ಮೆಸ್ಕಾಂ | 1744327 | 834652 | 743694 |
| ಸೆಸ್ಕ್ | 2393702 | 1493621 | 751919 |
| ಹೆಸ್ಕಾಂ | 3317039 | 1835933 | 1426203 |
| ಜೆಸ್ಕಾಂ | 2173021 | 1185068 | 706514 |
| ಒಟ್ಟು | 16641767 | 8621640 | 6881363 |

| | | |
|---|---|---|
| ಆ) | ಉಚಿತ ವಿದ್ಯುತ್‌ಗೆ ಸಂಬಂಧಪಟ್ಟಂತೆ ಗ್ಯಾರಂಟಿ ಘೋಷಿಸುವಾಗ ನೀಡಲಾಗಿದ್ದ ಆಶ್ವಾಸನೆ ಏನು; ಗ್ಯಾರಂಟಿ ಅನುಷ್ಠಾನಕ್ಕೆ ತರುವಾಗ ಷರತ್ತುಗಳನ್ನು ವಿಧಿಸಿದ್ದು ಏಕೆ; | ರಾಜ್ಯದಲ್ಲಿನ ಗೃಹ ಬಳಕೆದಾರರು ಪ್ರತಿ ಮಾಹೆಯಲ್ಲಿ ವಿವಿಧ ಹಂತದ / ಶ್ರೇಣಿಯಲ್ಲಿ ವಿದ್ಯುತ್ ಬಳಕೆ ಮಾಡುತ್ತಿದ್ದು, ಪ್ರತಿಯೊಬ್ಬ ಗ್ರಾಹಕರಿಗೂ ಪೂರ್ಣವಾಗಿ 200 ಯೂನಿಟ್ ಉಚಿತ ವಿದ್ಯುತ್ ಒದಗಿಸುವುದರಿಂದ ವಿದ್ಯುತ್ ದುರ್ಬಳಕೆ ಆಗುವ ಸಾಧ್ಯತೆ ಹೆಚ್ಚಾಗುವುದಾಗಿ ಪರಿಗಣಿಸಿ, ಗ್ರಾಹಕರು 2022-23 ರ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿದ ಸರಾಸರಿ ವಿದ್ಯುತ್ ಬಳಕೆಯ ಮೇಲೆ ಶೇ.10 ರಷ್ಟು ಹೆಚ್ಚಿನ ವಿದ್ಯುತ್ ಬಳಕೆಯ ಮಿತಿಯನ್ನು ಅನುಮತಿಸಿ ಮಾಸಿಕ 200 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ಒದಗಿಸಲು ಸರ್ಕಾರವು ತೀರ್ಮಾನಿಸಿ "ಗೃಹಜ್ಯೋತಿ" ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತದೆ. |
| ಇ) | ಎಲ್ಲಾ ಗ್ರಾಹಕರಿಗೆ 200 ಯೂನಿಟ್ ಉಚಿತ ವಿದ್ಯುತ್ ನೀಡುವ ಆಶ್ವಾಸನೆ ಈಡೇರಿಸುವ ಕುರಿತು ಸರ್ಕಾರದ ನಿಲುವೇನು; ಎಲ್ಲಾ ಗ್ರಾಹಕರಿಗೆ 200 ಯೂನಿಟ್ ಉಚಿತ ವಿದ್ಯುತ್ ನೀಡಲು ಆಗುವ ವೆಚ್ಚ ಎಷ್ಟು; ಈಗ ಆಗುತ್ತಿರುವ ವೆಚ್ಚ ಎಷ್ಟು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಎನರ್ಜಿ/164/ಪಿ.ಎಸ್.ಆರ್/2023 ದಿನಾಂಕ 05.06.2023 ರ ಅನ್ವಯ "ಗೃಹ ಜ್ಯೋತಿ ಯೋಜನೆ" ಯಡಿ ರಾಜ್ಯದಲ್ಲಿನ ಅರ್ಹ ಗೃಹ ಬಳಕೆ ಗ್ರಾಹಕರಿಗೆ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಠ 200 ಯೂನಿಟ್ ಗಳವರೆಗಿನ ಬಳಕೆಯ ಮಿತಿಯಲ್ಲಿ ಪ್ರತಿ ಗ್ರಾಹಕರ ಮಾಸಿಕ ಸರಾಸರಿ ಬಳಕೆಯ (ಆರ್ಥಿಕ ವರ್ಷ 2022-23 ರ ಬಳಕೆಯ ಆಧಾರದನ್ವಯ) ಯೂನಿಟ್‌ಗಳ ಮೇಲೆ ಶೇ.10ರಷ್ಟು ಹೆಚ್ಚಿನ ವಿದ್ಯುತ್ ಬಳಕೆಯ ಮಿತಿಯನ್ನು ಅನುಮತಿಸಿ, ಅದಕ್ಕನುಗುಣವಾಗಿ ವಿದ್ಯುತ್ ಬಿಲ್ಲಿನ ಮೊತ್ತವನ್ನು ಉಚಿತವಾಗಿ ಒದಗಿಸಲು, ಹಾಗೂ 200 ಯೂನಿಟ್‌ಗಳ ಬಳಕೆಯನ್ನು ಮೀರಿದ ಗ್ರಾಹಕರು ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಲು ಕೆಲವು ಷರತ್ತುಗಳೊಂದಿಗೆ ದಿನಾಂಕ: 01.08.2023 ರಿಂದ ಅನ್ವಯವಾಗುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. |

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿನ ಎಲ್ಲಾ ಮಾಹೆಯಾನ ಗೃಹಬಳಕೆ ಗ್ರಾಹಕರಿಗೆ 200 ಯೂನಿಟ್ ಉಚಿತ ವಿದ್ಯುತ್ ನೀಡಲು ತಗಲುವ ಅಂದಾಜು ವೆಚ್ಚದ ಕಂಪನಿವಾರು ವಿವರಗಳು ಕೆಳಗಿನಂತಿವೆ:

| ಕಂಪನಿ | ಗೃಹ ಬಳಕೆ ಒಟ್ಟು ಸ್ಥಾವರಗಳ ಸಂಖ್ಯೆ (ಜೂನ್-2024ರ ಅಂತ್ಯಕ್ಕೆ) | ಗೃಹ ಬಳಕೆ ಸ್ಥಾವರಗಳಿಗೆ ತಗಲುವ ಅಂದಾಜು ವೆಚ್ಚ (ಮಾಹೆಯಾನ) (ರೂ.ಕೋಟಿಗಳಲ್ಲಿ) |
|---|---|---|
| ಬೆಸ್ಕಾಂ | 9228875 | 1384 |
| ಮೆಸ್ಕಾಂ | 1925496 | 293 |
| ಸೆಸ್ಕ್ | 2528952 | 358 |
| ಹೆಸ್ಕಾಂ | 3665394 | 551 |
| ಜೆಸ್ಕಾಂ | 2446054 | 363 |
| **ಒಟ್ಟು** | **19794771** | **2949** |

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಗೃಹ ಜ್ಯೋತಿಯಡಿಯಲ್ಲಿ 200 ಯೂನಿಟ್‌ಗಳು ಉಚಿತವಾಗಿ ನೀಡಲು ಆಗುತ್ತಿರುವ ಜೂನ್-2024ರ ಮಾಹೆಯ ವೆಚ್ಚದ ವಿವರಗಳು ಕೆಳಗಿನಂತಿವೆ:

| ಕಂಪನಿ | ಗೃಹಜ್ಯೋತಿ ಫಲಾನುಭವಿಗಳ ಸಂಖ್ಯೆ | ಮಾಸಿಕ ವೆಚ್ಚ (ರೂ.ಕೋಟಿಗಳಲ್ಲಿ) |
|---|---|---|
| ಬೆಸ್ಕಾಂ | 6525399 | 356 |
| ಮೆಸ್ಕಾಂ | 1578346 | 86 |
| ಸೆಸ್ಕ್ | 2245540 | 95 |
| ಹೆಸ್ಕಾಂ | 3262136 | 144 |
| ಜೆಸ್ಕಾಂ | 1920650 | 97 |
| **ಒಟ್ಟು** | **15532071** | **978** |

ಸಂಖ್ಯೆ: ಎನರ್ಜಿ 192 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು